ಬಾಲಕರೇ ಮಾಲಿಕರು ಎನ್ನುವ ನಶೆಯಲ್ಲಿರುವ ಸಲುವಾಗಿ ಮನರೂಪೀ ಕುದುರೆಯ ರಾಜಾ ಆಗಿರಿ

ಇಂದು ವಿಶ್ವದ ಮಾಲಿಕನಾದ ತಂದೆಯು ತನ್ನ ನಾಲ್ಕೂ ಕಡೆಯ ಮಾಲಿಕರಿಂದ ಬಾಲಕರಾಗಿರುವ ಮಕ್ಕಳನ್ನು ನೋಡುತ್ತಾ ಇದ್ದಾರೆ. ಬಾಲಕರೂ ಆಗಿದ್ದೀರಿ ಮಾಲಿಕರೂ ಆಗಿದ್ದೀರಿ. ವಿಶ್ವದ ಮಾಲಿಕರಂತೂ ಭವಿಷ್ಯದಲ್ಲಿ ಆಗುವಿರಿ. ಆದರೆ ತಂದೆಯ ಸರ್ವ ಖಜಾನೆಗಳ ಮಾಲಿಕರು ಈಗ ಆಗಿದ್ದೀರಿ. ವಿಶ್ವರಾಜ್ಯಾಧಿಕಾರಿಯೇನೋ ಭವಿಷ್ಯದಲ್ಲಿ ಆಗುವಿರಿ. ಆದರೆ ಈಗ ಸ್ವರಾಜ್ಯ ಅಧಿಕಾರಿ ಆಗಿದ್ದೀರಿ. ಆದ್ದರಿಮ್ದ ಬಾಲಕರೂ ಆಗಿದ್ದೀರಿ ಹಾಗೂ ಮಾಲಿಕರೂ ಆಗಿದ್ದೀರಿ. ಇಬ್ಬರೂ ಆಗಿದ್ದೀರಲ್ಲವೇ. ಬಾಲಕತನದ ನಶೆಯು ಸದಾ ಇದ್ದೇ ಇರುತ್ತದೆ. ಬಾಪ್ದಾದಾರವರು ಏನು ನೋಡಿದರೆಂದರೆ ಬಾಲಕತನದ ನಶೆಯು ಇಮರ್ಜ್ ರೂಪದಲ್ಲಿಯಾಗಲೀ ಅಥವಾ ಮರ್ಜ್ ರೂಪದಲ್ಲಿ ಅಧಿಕ ಮಕ್ಕಳಿಗೆ ಇರುತ್ತದೆ. ಏಕೆಂದರೆ ಒಂದುವೇಳೆ ನೆನಪಿನಲ್ಲಿ ಕುಳಿತುಕೊಂಡರೂ ಸಹ ಏನು ನೆನಪಿರುತ್ತದೆ? ಬಾಬಾ ಎಂದು. ಬಾಬಾ ಎಂದು ವಿಚಾರ ಮಾಡುವುದು ಅಥವಾ ಹೇಳುವುದು ಸಂತಾನರಾಗಿರುವುದರಿಂದಲೇ ಹೇಳುತ್ತೀರಿ. ಹಾಗೂ ಯಾರು ಸತ್ಯವಾದ ಸೇವಾಧಾರಿಯಾಗಿದ್ದಾರೋ ಅವರ ಬಾಯಿಯಿಂದ ಪದೇ ಪದೇ ಏನು ಹೊರಬರುತ್ತದೆ? ಬಾಬಾರವರು ಹೀಗೆ ಹೇಳಿದರು, ಬಾಬಾರವರು ಇದನ್ನು ಹೇಳುತ್ತಾರೆ ಎಂದು ಇಡೀ ದಿನದಲ್ಲಿ ಚೆಕ್ (ಪರಿಶೀಲನೆ) ಮಾಡಿದರೆ ಎಷ್ಟು ಸಲ ಬಾಬಾ ಬಾಬಾ ಎನ್ನುವ ಶಬ್ದವನ್ನು ಸೇವೆ ಮಾಡುವಾಗ ಹೇಳುತ್ತಿರುತ್ತೀರಿ? ಆದರೆ ಎರಡು ಪ್ರಕಾರದವರು ಮನಸ್ಸಿನಿಂದ ಬಾಬಾ ಎಂದು ನುಡಿಯುತ್ತಾರೆ. ಹಾಗೂ ಇನ್ನೊಂದು ಪ್ರಕಾರದವರು ಜ್ಞಾನವಿರುವ ಕಾರಣ ಬುದ್ಧಿಯಿಂದ ಹೇಳುವವರಾಗಿದ್ದಾರೆ. ಯಾರು ಅಂತಃಕರಣದಿಂದ ಬಾಬಾ ಎಂದು ಹೇಳುತ್ತಾರೋ ಅವರಿಗೆ ಸಹಜವಾಗಿ ಮನಸ್ಸಿನಲ್ಲಿ ತಂದೆಯ ಮೂಲಕ ಪ್ರತ್ಯಕ್ಷ ಪ್ರಾಪ್ತಿಯಾಗಿ ಖುಷಿ ಹಾಗೂ ಶಕ್ತಿಯು ದೊರೆಯುತ್ತದೆ. ಹಾಗೂ ಯಾರು ಜ್ಞಾನದ ಅನುಸಾರವಾಗಿ ಕೇವಲ ಬುದ್ಧಿಯು ಉತ್ತಮವಾಗಿರುವ ಕಾರಣ ಜ್ಞಾನದಲ್ಲಿ ಬಾಬಾ ಬಾಬಾ ಎನ್ನುವ ಶಬ್ದವನ್ನು ಉಚ್ಚರಿಸುತ್ತಾರೋ ಅವರಿಗೆ ಆ ಸಮಯದಲ್ಲಿ ಹೇಳುವುದರಲ್ಲಿ ತನಗೂ ಖುಷಿಯಾಗುತ್ತದೆ ಹಾಗೂ ಕೇಳುವವರಿಗೂ ಸಹ ಆ ಸಮಯದಲ್ಲಿ ಖುಷಿಯಾಗುತ್ತದೆ, ಹಿತವೆನಿಸುತ್ತದೆ. ಆದರೆ ಸದಾಕಾಲದವರೆಗೆ ಮನಸ್ಸಿನಲ್ಲಿ ಖುಷಿ ಹಾಗೂ ಶಕ್ತಿ ಎರಡೂ ಇರುವುದಿಲ್ಲ. ಒಮ್ಮೊಮ್ಮೆ ಇರುವುದಿಲ್ಲ. ಏಕೆ? ಹೃದಯದಿಂದ ಬಾಬಾ ಎಂದು ನುಡಿಯಲಿಲ್ಲ. ಹೀಗೆ ಬಾಪ್ದಾದಾರವರು ಬಾಲಕತನದ ನಿಶ್ಚಯವು ಎಲ್ಲರಿಗೂ ಇರುವುದನ್ನು ನೋಡಿದೆವು. ನಶೆಯು ಒಮ್ಮೊಮ್ಮೆ ಇದೆ, ಒಮ್ಮೊಮ್ಮೆ ಇಲ್ಲ. ನಾನು ತಂದೆಯ ಸಂತಾನ ಆಗಿದ್ದೇನೆ ಎನ್ನುವ ನಿಶ್ಚಯದಲ್ಲಿ ಮೆಜಾರಿಟಿ (ಅಧಿಕ ಸಂಖ್ಯೆಯ ಮಕ್ಕಳು) ಸಯಾಗಿದ್ದಾರೆ. ಬಾಲಕರಂತೂ ಆಗಿಯೇ ಇದ್ದೀರಿ. ಆದರೆ ನೀವು ಕೇವಲ ಬಾಲಕ ಮಾತ್ರವಲ್ಲ, ಬಾಲಕರೇ ಮಾಲಿಕರಗಿದ್ದೀರಿ. ಡಬ್ಬಲ್ ಆಗಿದ್ದೀರಿ.

ಮಾಲಿಕತನದಲ್ಲಿ ಒಂದು ಸ್ವರಾಜ್ಯ ಅಧಿಕಾರೀ ಮಾಲಿಕರು ಹಾಗೂ ಎರಡನೆಯದಾಗಿ ತಂದೆಯ ಸರ್ವ ಖಜಾನೆಗಳನ್ನೂ ನಿಮ್ಮವನ್ನಾಗಿ ಮಾಡಿಕೊಂಡು ನನ್ನ ಆಸ್ತಿಯಾಗಿದೆ, ದಾತಾರು ತಂದೆಯಾಗಿದ್ದಾರೆ. ಆದರೆ ತಂದೆಯು ಕೊಟ್ಟರೋ ಅಥವಾ ನೀವು ಮಾಲಿಕರಾಗಿದ್ದೀರೋ, ಎಲ್ಲರಿಗೂ ಆಸ್ತಿಯು ಸಿಕ್ಕಿದೆಯೇ? ಯಾರಿಗೋ ಕಡಿಮೆ, ಯಾರಿಗೋ ಜಾಸ್ತಿ ಸಿಕ್ಕಿಲ್ಲ ತಾನೇ? ಎಲ್ಲರಿಗೂ ಒಂದೇ ಸಮನಾಗಿ ಸಿಕ್ಕಿದೆಯಲ್ಲವೇ? ಅಥವಾ ಯಾರಿಗೋ ಒಂದು ಕೋಟಿ ಸಿಕ್ಕಿದೆ ಹಾಗೂ ಇನ್ನೊಬ್ಬರಿಗೆ 10 ಕೋಟಿ ಸಿಕ್ಕಿದೆಯೋ? ಹಾಗೇನೂ ವ್ಯತ್ಯಾಸವಾಗಿಲ್ಲ ತಾನೇ. ಏಕೆಂದರೆ ತಂದೆಯ ಖಜಾನೆಯು ಬೇಹದ್ದಿನದಾಗಿದೆ (ಅಪರಿಮಿತವಾಗಿದೆ) ಹಂಚುವುದು ಎಷ್ಟು ಮಕ್ಕಳಿಗಾದರೂ ತಂದೆಯ ಖಜಾನೆಯು ಕಡಿಮೆಯಾಗುವುದಿಲ್ಲ. ತೆರೆದ ಭಂಡಾರವಾಗಿದೆ ಹಾಗೂ ಸಂಪನ್ನ ಭಂಡಾರವಾಗಿದೆ. ಆದ್ದರಿಂದ ತಂದೆಯು ಯಾರಿಗಾದರೂ ಕಡೀಮೆ ಏಕೆ ಕೊಡಲಿ? ಯಾವಾಗ ಖಜಾನೆಯು ಮಕ್ಕಳ ಸಲುವಾಗಿಯೇ ಇದೆಯೋ ಆಗ ಯಾರಿಗಾದರೂ ಹೆಚ್ಚು, ಯಾರಿಗಾದರೂ ಕಡಿಮೆ ಏಕೆ ಕೊಡಲಿ. ಹೀಗೆ ಒಬ್ಬ ತಂದೆಯ ಆಸ್ತಿಗೆ ಅಧಿಕಾರೀ ಮಾಲಿಕರು ಹಾಗೂ ಇನ್ನೊಂದು ಸ್ವರಾಜ್ಯದ ಮಾಲಿಕರು ಆಗಿದ್ದೀರಿ. ಹಾಗಾದರೆ ಸ್ವರಾಜ್ಯವು ಸಿಕ್ಕಿದೆಯೇ? ಹೀಗೆ ಎರಡರ ಮಾಲಿಕರಾಗಿದ್ದೀರಾ? ಮಾಲಿಕರಾಗಿದ್ದೀರಲ್ಲವೇ? ಮಾಲಿಕ್ಕರಾಗಿದ್ದೀರಲ್ಲವೇ? ಮಾಲಿಕರಾಗಿದ್ದೀರಿ ತಾನೇ? ಪಕ್ಕಾ ಮಾಲಿಕರಾಗಿದ್ದೀರಲ್ಲವೇ? ಆದ್ದರಿಂದ ಬಾಪ್ದಾದಾರವರು ಏನು ನೋಡಿದರೆಂದರೆ ಮಾಲಿಕತನದಲ್ಲಿ ಎಷ್ಟು ಸಮಯ ಇರುತ್ತೀರಿ? ಮಾಲಿಕರಾಗಿ ಎಷ್ಟು ಸಮಯ ನಡೆಯುತ್ತೀರಿ? ಹೀಗೆ ಬಾಪ್ದಾದಾರವರು ಏನು ನೋಡಿದೆವು? ಹೇಳುವುದೇನೋ ಸ್ವರಾಜ್ಯವು ನಮ್ಮ ಜನ್ಮಸಿದ್ಧ ಅಧಿಕಾರವಾಗಿದೆ ಎಂದು ಹೇಳುತ್ತೀರೋ. ಹೀಗೆ ಹೇಳುತ್ತೀರಲ್ಲವೇ? ಅಥವಾ ಮಹಾರಥಿಗಳ ಜನ್ಮಸಿದ್ಧ ಅಧಿಕಾರವಾಗಿದೆ ನಮ್ಮದಲ್ಲ ಎಂದು ಹೇಳುತ್ತೀರೋ. ಪೂರ್ತಿ ನಿಮ್ಮದಾಗಿದೆಯೇ? ಮಾತೆಯರದೂ ಪೂರ್ತಿ ಅಧಿಕಾರವಿದೆಯೇ? ಪಾಂಡವರಿಗೂ ಸಹ ಪೂರ್ತಿ ಸ್ವರಾಜ್ಯಾಧಿಕಾರವು ಸಿಕ್ಕಿದೆಯೇ? ಅಥವಾ ಅಲ್ಪಸ್ವಲ್ಪ ಸಿಕ್ಕಿದೆಯೋ? ಇದರಲ್ಲಿ ಪಕ್ಕಾ ಆಗಿ ಇರಿ. ಪೂರ್ತಿ ಪಕ್ಕಾ ಆಗಿರಿ. ಏನು ಪರಿಶೀಲನೆ ಮಾಡಿಕೊಳ್ಳಿರೆಂದರೆ ಸ್ವರಾಜ್ಯಾಧಿಕಾರೀ ಮಕ್ಕಳ ಕರ್ಮಚಾರಿ ಆಗಿರುವ ಸರ್ವ ಕರ್ಮೇಂದ್ರಿಯಗಳೂ ಕರ್ಮಚಾರಿಯಾಗಿವೆಯಲ್ಲವೇ? ಮಾಲಿಕರಂತೂ ಆಗಿಲ್ಲ ತಾನೇ? ಹಾಗೂ ನೀವು ಮಾಲಿಕರಾಗಿದ್ದೀರಿ. ಇದು ಸರಿಯಾಗಿದೆಯಲ್ಲವೇ? ಅಥವಾ ಕರ್ಮಚಾರಿಗಳು ಮಾಲಿಕರಾಗಿವೆಯೋ? ಹಾಗೂ ನೀವು ಕರ್ಮಚಾರಿ ಆಗಿಬಿಡುತ್ತೀರೋ?

ಹೀಗೆ ಬಾಪ್ದಾದಾರವರು ಏನು ನೋಡಿದರೆಂದರೆ, ಮಕ್ಕಳ ಸ್ಥಿತಿಯಲ್ಲಿ ಮಾಲಿಕತನವನ್ನು ಎಲ್ಲಕ್ಕಿಂತಲೂ ಹೆಚ್ಚು ಮರೆಸುವುದು ಅಥವಾರಾಜನಿಂದ ತನ್ನ ವಶದಲ್ಲಿ ಸಮಯ ಪ್ರತಿಸಮಯ ತಂದುಕೊಳ್ಳುವುದು ಮನಸ್ಸಾಗಿದೆ. ಆದ್ದರಿಂದ ತಂದೆಯ ಮಂತ್ರವೂ ಸಹ ಮನ್ಮನಾಭವ ಆಗಿದೆ. ತನು ಮನಾಭವ, ಧನ ಅಥವಾ ಬುದ್ಧಿ ಮನಾಭವ ಎನ್ನುವ ಮಂತ್ರವನ್ನು ತಂದೆಯು ಕೊಟ್ಟಿಲ್ಲ. ಮನ್ಮನಾಭವ ಆಗಿದೆ. ಹೀಗೆ ಮನಸ್ಸು ತನ್ನ ಪ್ರಭಾವವನ್ನು ಬೀರಿ ಬಿಡುತ್ತದೆ. ಮನಸ್ಸಿನ ವಶದಲ್ಲಿ ಬಂದು ಬಿಡುತ್ತಾರೆ. ನೋಡಿರಿ ಯಾವುದಾದರೂ ಅತಿ ಸಣ್ಣ ವ್ಯರ್ಥ ಸಂಗತಿ ಅಥವಾ ವ್ಯರ್ಥ ವಾತಾವರಣ ಅಥವಾ ವ್ಯರ್ಥ ದೃಶ್ಯ ಎಲ್ಲದರ ಪ್ರಭಾವವು ಮೊದಲು ಯಾವುದರ ಮೇಲೆ ಆಗುತ್ತದೆ? ಮನಸ್ಸಿನ ಮೇಲೆ ಪ್ರಭಾವವಾಗುತ್ತದೆಯಲ್ಲವೇ. ಆಮೇಲೆ ಬುದ್ಧಿಯು ಅದಕ್ಕೆ ಸಹಯೋಗ ಕೊಡುತ್ತದೆ. ಹಾಗೂ ಮನಸ್ಸು ಮತ್ತು ಬುದ್ಧಿಯು ಒಂದುವೇಳೆ ಅದೇ ಪ್ರಕಾರ ನಡೆಯುತ್ತಿದ್ದರೆ ಸಂಸ್ಕಾರವಾಗಿ ಬಿಡುತ್ತದೆ. ಈಗಲೂ ಸಹ ನಿಮ್ಮನ್ನು ಪರಿಶೀಲನೆ ಮಾಡಿಕೊಳ್ಳಿರಿ. ನನ್ನ ವ್ಯರ್ಥ ಸಂಸ್ಕಾರವೇನಿದೆಯೋ ಅದು ಹೇಗೆ ರೂಪುಗೊಂಡಿತು? ಯಾರದಾದರೂ ಸಂಸ್ಕಾರವು ಸಣ್ಣಪುಟ್ಟ ಸಂಗತಿಯಿಂದ ಒಂದು ಸೆಕೆಂಡಿನಲ್ಲಿ ಫೀಲಿಂಗ್ನಲ್ಲಿ ಬಂದು ಬಿಡುವುದು, ಹೇಗೆ ಅವರಲ್ಲಿ ಬಂದಿತು? ಆಮೇಲೆ ಏನು ಹೇಳುತ್ತಾರೆಂದರೆ ನಾನೇನೂ ಬಯಸುವುದಿಲ್ಲ. ವಿಚಾರವನ್ನೂ ಮಾಡುತ್ತೇನೆ. ಆದರೆ ಆಗಿ ಬಿಡುತ್ತದೆ ಎಂದು ಹೇಳುತ್ತಾರೆ. ಅವರನ್ನು ಸಂಸ್ಕಾರ ವಶರಾಗುವವರೆಂದು ಹೇಳಲಾಗುತ್ತದೆ. ಒಬ್ಬೊಬರ ಮನಸ್ಸು ಸ್ವಲ್ಪ ಸಮಯದಲ್ಲಿಯೇ ಬೇಸರಗೊಳ್ಳುತ್ತದೆ. ಸ್ವಲ್ಪ ಏನಾದರೂ ನೋಡಿದರೆ, ಅಥವಾ ಕೇಳಿದರೆ, ಮನಸ್ಸು ವ್ಯಕುಲವಾಗಿ ಬಿಡುತ್ತದೆ. ಒಂದುವೇಳೆ ಯಾರಾದರೂ ಕೇಳಿದರೆ, ಏನು ಹೇಳುತ್ತಾರೆ? ಅಂತಹುದೇನೂ ಆಗಿಲ್ಲ. ಇದು ನನ್ನ ಸಂಸ್ಕಾರವಾಗಿದೆ ಎಂದು ಹೇಳುತ್ತಾರೆ. ಸರಿಹೋಗಿಬಿಡುತ್ತದೆ, ಸಂಸ್ಕಾರವಾಗಿದೆ ಎಂದು ಹೇಳುತ್ತಾರೆ. ಆದರೆ ಅದು ಹೇಗೆ ಸಂಸ್ಕಾರವಾಯಿತು? ಮನಸ್ಸು ಹಾಗೂ ಬುದ್ಧಿಯ ಆಧಾರದಿಂದ ಸಂಸ್ಕಾರವಾಗಿ ಬಿಟ್ಟಿತು. ಬ್ರಾಹ್ಮಣ ಸಂಸ್ಕಾರವಲ್ಲದ ಭಿನ್ನ ಭಿನ್ನ ಸಂಸ್ಕಾರಗಳು ಇನ್ನೂ ಇವೆ. ಯಾರೊಂದಿಗಾದರೂ ನೀವು ಯಾರಾಗಿದ್ದೀರಿ ಎಂದು ಕೇಳಿದರೆ ಏನು ಹೇಳಿಕೊಳ್ಳುತ್ತಾರೆ? ಬ್ರಹ್ಮಾಕುಮಾರಿ ಅಥವಾ ಬ್ರಹ್ಮಾಕುಮಾರ ಆಗಿದ್ದೇನೆಂದು ಹೇಳಿಕೊಳ್ಳುತ್ತಾರೆ. ಬ್ರಹ್ಮಾರವರ ಮಕ್ಕಳು ಯಾರಾದರು? ಬ್ರಾಹ್ಮಣ. ಆದರೆ ಯಾವಾಗ ವ್ಯರ್ಥ ಸಂಸ್ಕಾರದ ವಶವಾಗಿ ಬಿಡುತ್ತಾರೋ ಆ ಸಮಯದಲ್ಲಿ ಬ್ರಹ್ಮಕುಮಾರ, ಬ್ರಾಹ್ಮಣ ಆಗಿರುತ್ತಾರೋ ಅಥವಾ ಕ್ಷತ್ರಿಯರಾಗಿರುತ್ತಾರೋ? ಇದಲ್ಲ, ಇದಲ್ಲ ಎಂದು ತಮ್ಮೊಂದಿಗೆ ಯುದ್ಧ ಮಾಡುತ್ತಾರಲ್ಲವೇ. ಆದ್ದರಿಂದ ಬ್ರಾಹ್ಮಣರಾದರೋ ಅಥವಾ ಕ್ಷತ್ರಿಯರಾದರೋ? ಹಲವು ಮಕ್ಕಳು ಏನು ಹೇಳುತ್ತಾರೆಂದರೆ ಎರಡು ದಿನಗಳಿಂದ ನನ್ನ ಮನಸ್ಸಿನಲ್ಲಿ ಖುಷಿಯು ಮಾಯವಾಗಿ ಬಿಟ್ಟಿದೆ, ಏನು ಕಾರಣವೋ ಗೊತ್ತಿಲ್ಲ ಎಂದು. ವಾಸ್ತವವಾಗಿ ಅಂತರ್ಯದಲ್ಲಿ ತಿಳಿದುಕೊಂಡಿರುತ್ತಾರೆ. ಆದರೆ ಬಾಹ್ಯದಲ್ಲಿ ಏನು ಕಾರಣವೋ ಗೊತ್ತಿಲ್ಲ ಎಂದು ಹೇಳುತ್ತಾರೆ. ಆದರೆ ಆ ದಿನ ಬ್ರಾಹ್ಮಣರಾಗಿರುತ್ತಾರೋ ಅಥವಾ ಕ್ಷತ್ರಿಯರಾಗಿರುತ್ತಾರೋ? ಯಾರ ಖುಷಿಯು ಮಾಯವಾಗುತ್ತದೆಯೋ ಅವರು ಬ್ರಾಹ್ಮಣರಾಗಿದ್ದಾರೆಯೇ? ಹಾಗಾದರೆ ಒಮ್ಮೊಮ್ಮೆ ಬ್ರಾಹ್ಮಣ ಒಮ್ಮೊಮ್ಮೆ ಕ್ಷತಿಯರಾಗುತ್ತೀರಾ? ಪಕ್ಕಾ ಮಾಲಿಕ ಆಗಿದ್ದೇನೆ ಎಂದು ಎಲ್ಲರಿಗೂ ಹೇಳಿದಿರಲ್ಲವೇ. ಆದರೆ ಆ ಸಮಯದಲ್ಲಿ ಮಾಲಿಕರಾಗಿದ್ದಾರೋ ಅಥವಾ ಪರವಶರಾಗಿದ್ದಾರೋ?

ಬಾಪ್ದಾದರು ಏನು ನೋಡಿದರೆಂದರೆ, ಮಾಲಿಕತನವನ್ನು ಅಭದ್ರ ಮಾಡುವುದು ವಿಶೇಷವಾಗಿ ಮನಸ್ಸಾಗಿದೆ ಎಂಬುದನ್ನು ಹಾಗೂ ನೀವು ಸ್ವರಾಜ್ಯಾಧಿಕಾರಿ ರಾಜಾ ಆಗಿದ್ದೀರಿ. ಹಾಗೂ ಮನಸ್ಸು ನಿಮ್ಮ ಮಂತ್ರಿಯಾಗಿದೆ ಅಥವಾ ಮನಸ್ಸು ಮಾಲಿಕ ಆಗಿದೆಯೋ ಹಾಗೂ ನೀವು ಮಂತ್ರಿಯಾಗಿದ್ದೀರೋ? ನೀವು ರಾಜಾ ಆಗಿದ್ದೀರಲ್ಲವೇ, ಮನಸ್ಸೇನೂ ರಾಜ ಆಗಿಲ್ಲ ತಾನೇ. ಮಂತ್ರಿಯಾಗಿದೆ. ಸಹಯೋಗಿಯಾಗಿದೆಯಲ್ಲವೇ. ಹೀಗೆ ಮನಸ್ಸಿನ ಮೇಲೆ ಮಾಲೀಕತನವು ಸದಾ ಇರಬೇಕು. ಆಗ ಸ್ವರಾಜ್ಯಾಧಿಕಾರಿ ಆಗಿದ್ದೀರೆಂದು ಹೇಳಬಹುದು. ಇಲ್ಲದಿದ್ದರೆ ಒಮ್ಮೊಮ್ಮೆ ರಾಜ್ಯಾಧಿಕಾರಿ ಒಮ್ಮೊಮ್ಮೆ ಅಧೀನ ಆಗುವಿರಿ. ಇದರ ಕಾರಣವು ಏನಾಗಿದೆ ಏಕೆ ಪರಿವರ್ತನೆಯಾಗುವುದಿಲ್ಲ? ತಿಳಿದುಕೊಂಡಿದ್ದರೂ ಸಹ ಸಂಸ್ಕಾರದ ವಶವಾಗಿ ಬಿಡುತ್ತೀರಿ. ಸಂಸ್ಕಾರವು ಹೇಗೆ ರೂಪುಗೊಂಡಿತು ಎಂಬುದನ್ನು ಇಂದು ಬಾಪ್ದಾದಾರು ತಿಳಿಸಿಕೊಟ್ಟರು. ಮೊದಲು ಮನಸ್ಸನ್ನು ಕಂಟ್ರೋಲ್ (ನಿಯಂತ್ರಣ) ಮಾಡಿರಿ. ರಾಜಾ ಆಗಿದ್ದೇನೆ ಎಂದು ಹೇಳುತ್ತೀರಿ. ಆದರೆ ರಾಜನ ಅರ್ಥವೇನೆಂದರೆ ಯಾರಲ್ಲಿ ರೂಲಿಂಗ್ಪಾವರ್ (ಆಡಳಿತ ಶಕ್ತಿ) ಇದೆಯೋ ಅವರು. ಒಂದುವೇಳೆ ಹೆಸರು ರಾಜಾ ಆಗಿದ್ದು ಅದರಲ್ಲಿ ಆಡಳಿತಶಕ್ತಿ ಇಲ್ಲದಿದ್ದರೆ ಅವರ ಗತಿಯು ಏನಾಗುವುದು? ಅವರ ರಾಜ್ಯವು ನಡೆಯುತ್ತದೆಯೇ? ನಡೆಯುವುದಿಲ್ಲ. ಹಾಗಾದರೆ ಆಡಳಿತ ಶಕ್ತಿಯು ಬಂದಿದೆಯೇ? ಎಷ್ಟು ಬಂದಿದೆ? ಶೇಕಡಾ ಎಷ್ಟು ಪ್ರಮಾಣದಲ್ಲಿ ಧಾರಣೆಯಾಗಿದೆ ಎಂಬುದನ್ನು ಪರಿಶೀಲನೆ ಮಾಡಿಕೊಳ್ಳಿರಿ.

ಒಂದು ತಪ್ಪನ್ನು ತುಂಬಾ ಮಾಡುತ್ತೀರಿ. ಅದರ ಕಾರಣದಿಂದಲೂ ಸಹ ಸಂಸ್ಕಾರದ ಮೇಲೆ ಜಯ ಪಡೆಯಲು ಸಾಧ್ಯವಾಗುವುದಿಲ್ಲ. ತುಂಬಾ ಸಮಯವು ಹಿಡಿಯುತ್ತದೆ. ನಾಳೆಯಿಂದ ಮಾಡುವುದಿಲ್ಲ ಎಂದು ತಿಳಿದುಕೊಳ್ಳುತ್ತೀರಿ. ಆದರೆ ಯಾವಾಗ ನಾಳೆಯಾಗುತ್ತದೆಯೋ ಆಗ ಇಂದಿಗಿಂತಲೂ ನಾಳೆ ಇಂದಿನ ಸಮಸ್ಯೆಯು ದೊಡ್ಡದಾಗಿ ಬಿಡುತ್ತದೆ. ಆಗ ಏನು ಹೇಳುತ್ತೀರೆಂದರೆ, ನಿನ್ನೆ ಸಣ್ಣ ಸಮಸ್ಯೆಯಾಗಿತ್ತು. ಈ ದಿನವಾದರೋ ಬಹಳ ದೊಡ್ಡ ಸಮಸ್ಯೆಯಾಗಿತ್ತು. ಆದ್ದರಿಂದ ದೊಡ್ಡ ಸಮಸ್ಯೆಯಾಗಿರುವ ಕಾರಣ ಸ್ವಲ್ಪ ತಪ್ಪಾಗಿ ಬಿಟ್ಟಿತು. ಮುಂದೆ ಸರಿಪಡಿಸಿಕೊಳ್ಳುವೆನು" ಎಂದು ಹಿರಿಯರಿಗೆ ಅಥವಾ ನಿಮ್ಮ ಮನಸ್ಸಿಗೆ ಭರವಸೆ ಕೊಡುತ್ತೀರಿ. ಹಾಗೂ ಈ ಭರವಸೆ ಕೊಡುತ್ತಾ ನಡೆಯುತ್ತೀರಿ. ಆದರೆ ಇದು ಭರವಸೆಯಲ್ಲ. ಇದು ಮೋಸವಾಗಿದೆ. ಆ ಸಮಯದಲ್ಲಿ ಸ್ವಲ್ಪ ಸಮಯದವರೆಗೆ ನಿಮಗೆ ಅಥವಾ ಅನ್ಯರಿಗೆ ಭರವಸೆ ಕೊಡಬೇಕು. ಆಮೇಲೆ ಸರಿಯಾಗಿ

ಬಿಡುತ್ತೇನೆ' ಎಂದು ನೀವು ತಿಳಿದುಕೊಳ್ಳುತ್ತೀರಿ. ಆದರೆ ಹೀಗೆ ಸ್ವಯಂ ನಿಮಗೆ ಮೋಸ ಮಾಡಿಕೊಳ್ಳುವ ಅಭ್ಯಾಸವನ್ನು ಪಕ್ಕಾ ಮಾಡಿಕೊಳ್ಳುತ್ತಾ ಹೋಗುತ್ತೀರಿ. ಅದು ಈ ಸಮಯದಲ್ಲಿ ಗೊತ್ತಾಗುವುದಿಲ್ಲ. ಆದರೆ ಯಾವಾಗ ಪ್ರತ್ಯಕ್ಷದಲ್ಲಿ ಮೋಸವಾಗುತ್ತದೆಯೋ ಆಗ ಇದು ಮೋಸವೇ ಆಗಿದೆಯೆಂದು ತಿಳಿದುಕೊಳ್ಳುತ್ತೀರಿ. ಹೀಗೆ ಏನು ತಪ್ಪು ಮಾಡುತ್ತೀರಿ? ಯಾವಾಗಲಾದರೂ ದೊಡ್ಡವರಾಗಲೀ ಅಥವಾ ಸಣ್ಣವರಾಗಲೀ ಒಬ್ಬರಿಗೊಬ್ಬರು ಶಿಕ್ಷಣ ನೀಡುವಾಗ ಏನು ಹೇಳುತ್ತೀರಿ? ಇದು ನನ್ನ ಸ್ವಭಾವವಾಗಿದೆ. ನನ್ನ ಸಂಸ್ಕಾರವಾಗಿದೆ ಎಂದು ಹೇಳುತ್ತೀರಿ. ಒಬ್ಬೊಬ್ಬರದು ಉದ್ವಿಗ್ನರಾಗುವುದು, ಒಬ್ಬೊಬ್ಬರದು ದೂರಸರಿದು ಬಿಡುವುದು, ಒಬ್ಬೊಬ್ಬರದು ಪದೇ ಪದೇ ಪರಚಿಂತನೆ ಮಾಡುವುದು, ಒಬ್ಬೊಬ್ಬರದು ಪರಚಿಂತನೆಯನ್ನು ಕೇಳುವುದು, ಹೀಗೆ ಭಿನ್ನ ಭಿನ್ನ ಸಂಸ್ಕಾರಗಳಿವೆ. ಅದನ್ನಂತೂ ನೀವು ತಂದೆಗಿಂತಲೂ ಹೆಚ್ಚು ತಿಳಿದುಕೊಂಡಿದ್ದೀರಿ. ಆದರೆ ಯಾವುದನ್ನು ನೀವು ನನ್ನ ಸಂಸ್ಕಾರವಾಗಿದೆಯೆಂದು ಹೇಳಿದಿರೋ ಅದು ನನ್ನ ಸಂಸ್ಕಾರವಾಗಿದೆಯೇ ಎಂದು ಬಾಪ್ದಾದಾರವರು ಕೇಳುತ್ತಾರೆ. ನನ್ನದಾಗಿದೆಯೇ? ಯಾರದಾಗಿದೆ? (ರಾವಣನದು) ಹಾಗಾದರೆ ನನ್ನದಾಗಿದೆಯೆಂದು ಏಕೆ ಹೇಳಿದಿರಿ? ಇದು ರಾವಣನ ಸಂಸ್ಕಾರವಾಗಿದೆಯೆಂದು ಎಂದೂ ಹೇಳುವುದಿಲ್ಲ. ನನ್ನ ಸಂಸ್ಕಾರವಾಗಿದೆಯೆಂದು ಹೇಳುತ್ತೀರಿ. ಆದ್ದರಿಂದ ಈ ''ನನ್ನ'' ಎನ್ನುವ ಶಬ್ದವೇ ಪುರುಷಾರ್ಥದಲ್ಲಿ ದುರ್ಬಲರನ್ನಾಗಿ ಮಾಡುತ್ತದೆ. ಈ ರಾವಣನ ವಸ್ತುವನ್ನು ಒಳಗಡೆ ಏಕೆ ಬಚ್ಚಿಟ್ಟುಕೊಂಡಿದ್ದೀರಿ" ಜನರಂತೂ ರಾವಣನ ಬೊಂಬೆಯನ್ನು ಸುಟ್ಟುಹಾಕುತ್ತಾರೆ. ಕೊಂದ ನಂತರ ಸುಡುತ್ತಾರೆ. ಸುಟ್ಟಮೇಲೆ ಏನು ಸ್ವಲ್ಪ ಉಳಿಯುತ್ತದೆಯೋ ಅದನ್ನೂ ಸಹ ನದಿಯ ನೀರಿನಲ್ಲಿ ವಿಸರ್ಜನೆ ಮಾಡಿಬಿಡುತ್ತಾರೆ. ಆದರೆ ನೀವು ನನ್ನದಾಗಿದೆಯೆಂದು ಹೇಳಿ ಇಟ್ಟುಕೊಂಡಿದ್ದೀರಿ. ಆದ್ದರಿಂದ ಎಲ್ಲಿ ರಾವಣನ ವಸ್ತುವು ಇರುತ್ತದೆಯೋ ಅಲ್ಲಿ ಅಶುದ್ಧಿಯ ಜೊತೆಯಲ್ಲಿ ಶುದ್ಧ ಸಂಸ್ಕಾರವು ಒಟ್ಟಿಗೆ ಇರುತ್ತದೆಯೇನು? ಇರುತ್ತದೆಯೇ? ಹಾಗೂ ರಾಜ್ಯವು ಯಾರದಾಗಿದೆ? ಅಶುದ್ಧದ್ದು, ಶುದ್ಧದ ರಾಜ್ಯವಂತೂ ಅಲ್ಲವಲ್ಲವೇ, ಹೀಗೆ ರಾಜ್ಯವು ಅಶುದ್ಧದ್ದಾಗಿದೆ ಹಾಗೂ ಅಶುದ್ಧ ವಸ್ತುವನ್ನು ನಿಮ್ಮ ಬಳಿ ಜೋಪಾನ ಮಾಡಿ ಇಟ್ಟುಕೊಂಡಿದ್ದೀರಿ. ಹೇಗೆ ಚಿನ್ನ ಅಥವಾ ವಜ್ರವನ್ನು ಜೋಪಾನವಾಗಿ ಇಟ್ಟುಕೊಳ್ಳುತ್ತಾರೆ. ಹೀಗೆ ಅಶುದ್ಧ ಹಾಗೂ ಶುದ್ಧ ಇವೆರಡರ ಯುದ್ಧವು ನಡೆಯುತ್ತಿರುವುದರಿಂದ ಪದೇ ಪದೇ ಬ್ರಾಹ್ಮಣರಿಂದ ಕ್ಷತ್ರಿಯರಾಗಿ ಬಿಡುತ್ತೀರಿ. ನನ್ನ ಸಂಸ್ಕಾರವು ಯಾವುದಾಗಿದೆ? ಏನು ತಂದೆಯ ಸಂಸ್ಕಾರವಾಗಿದೆಯೋ ಅದು. ವಿಶೇಷವಾಗಿ ವಿಶ್ವಕಲ್ಯಾಣಕಾರೀ, ಶುಭಚಿಂತನಧಾರೀ ಸಂಸ್ಕಾರ ಸರ್ವರ ಶುಭ ಭಾವನೆ ಶುಭಕಾಮನಾಧಾರಿಯದು ನನ್ನ (ಒರಿಜಿನಲ್) ಮೂಲ ಸಂಸ್ಕಾರವಾಗಿದೆ. ಉಳಿದವು ನನ್ನ ಸಂಸ್ಕಾರವಲ್ಲ ಹಾಗೂ ಇದೇ ಅಶುದ್ಧಿಯು ಏನು ಒಳಗಡೆ ಅಡಗಿದೆಯೋ ಅದು ಸಂಪೂರ್ಣ ಶುದ್ಧ ಆಗುವುದರಲ್ಲಿ ವಿಘ್ನವನ್ನು ಹಾಕುತ್ತದೆ, ಆದ್ದರಿಂದ ಏನು ಆಗಲು ಬಯಸುತ್ತೀರೊ, ಲಕ್ಷ್ಯ ವನ್ನು ಇಟ್ಟುಕೊಳ್ಳುತ್ತೀರೋ ಅದರಲ್ಲಿ ಪ್ರತ್ಯಕ್ಷ ಲಕ್ಷಣದಲ್ಲಿ ಅಂತರವುಂಟಾಗಿ ಬಿಡುತ್ತದೆ.

ಮೆಜಾರಿಟಿ (ಅಧಿಕ ಸಂಖ್ಯೆಯ) ಮಕ್ಕಳು ವಿಚಾರ ಮಾಡಿದ್ದೀರಿ, ಅನೇಕರು ಸಂಕಲ್ಪವನ್ನೂ ಮಾಡಿದಿರಿ. ಬರೆದೂ ಇದ್ದೀರಿ – ಈ ಡೈಮಂಡ್ ಜೂಬಿಲಿಯಲ್ಲಿ ತಂದೆಯ ಸಮಾನ ವಜ್ರವಾಗಲೇ ಬೇಕು ಎಂದು. ಈ ಸಂಕಲ್ಪವಿದೆಯೇ? ಅಥವಾ ವಿಚಾರ ಮಾಡಬೇಕಾಗುತ್ತದೆಯೋ? ವಿಚಾರ ಮಾಡಬೇಕಾಗಿದ್ದರೆ ವಿಚಾರಮಾಡಿರಿ. ಆದರೆ ಸ್ಥಾನವು ಹಿಂದಿನದು ದೊರೆಯುವುದು. ಯಾರು ಮಾಡುತ್ತಾರೋ ಅವರು ಪಡೆಯುತ್ತಾರೆ ಎನ್ನುವ ಲೋಕೋಕ್ತಿಯೂ ಇದೆ. ಹೀಗೆ ಸಂಕಲ್ಪವೇನೋ ತುಂಬಾ ಉತ್ತಮವಾದುದನ್ನು ಮಾಡುತ್ತೀರಿ. ಬಾಪ್ದಾದಾರವರೂ ಸಹ ಓದಿ, ಕೇಳಿ ಖುಷಿಯಾಗುತ್ತಾರೆ. ಆದರೆ ಬಚ್ಚಿಟ್ಟುಕೊಂಡಿರುವ ಈ ರಾವಣನ ವಸ್ತುವಿದೆಯೋ ಅದು ಮನಸ್ಸಿನ ಮಾಲಿಕರಾಗಲು ಬಿಡುವುದಿಲ್ಲ. ನನ್ನ ಅಭ್ಯಾಸವಾಗಿದೆ. ನನ್ನ ಸ್ವಭಾವವಾಗಿದೆ. ನನ್ನ ಸಂಸ್ಕಾರವಾಗಿದೆ, ನನ್ನ ನೇಚರ್ ಆಗಿದೆ - ಈ ಎಲ್ಲಾ ರಾವಣನ ಆಸ್ತಿಯನ್ನು ಜೊತೆಯಲ್ಲಿ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೀರಿ. ಆದ್ದರಿಂದ ದಿಲಾರಾಮ್ (ಹೃದಯ ರಾಮ)ನು ಎಲ್ಲಿ ಕುಳಿತುಕೊಳ್ಳಲಿ. ರಾವಣನ ಆಸ್ತಿಯ ಮೇಲೆ ಕುಳಿತುಕೊಳ್ಳಬೇಕೇನು? ಆದ್ದರಿಂದ ಈಗ ಇದನ್ನು ನಿರ್ಮೂಲ ಮಾಡಿರಿ.

ಯಾವಾಗ ನನ್ನ ಎನ್ನುವ ಶಬ್ದವನ್ನು ನುಡಿಯುತ್ತೀರೋ ಆಗ ನನ್ನ ಸ್ವಭಾವ ಅಥವಾ ನನ್ನ ಸಂಸ್ಕಾರವು ಏನಾಗಿದೆಯೆಂದು ವಿಚಾರ ಮಾಡಿರಿ. ಅಲ್ಲದೆ ಮನಸ್ಸನ್ನು ಪ್ರಾಪಂಚಿಕ ಜನರೂ ಸಹ ಕುದುರೆಯಾಗಿದೆ ಎಂದು ಹೇಳುತ್ತಾರೆ. ಅದು ತುಂಬಾ ಓಡುತ್ತದೆ. ಹಾಗೂ ತೀವ್ರ ವೇಗದಿಂದ ಓಡುತ್ತದೆ. ಆದರೆ ನಿಮ್ಮ ಮನಸ್ಸು ಓಡಬೇಕೇನು? ನಿಮಗೆ ಶ್ರೀಮತದ ಲಗಾಮು ಶಕ್ತಿಶಾಲಿಯಾದುದು ಇದೆ. ಒಂದುವೇಳೆ ಲಗಾಮು ಬಿಗಿಯಾಗಿದ್ದರೆ ಏನು ಚಂಚಲವಾಗುವುದು ಸಾಧ್ಯವಾಗುವುದಿಲ್ಲ. ಆದರೆ ನೀವು ಶುಂಬಾ ಏನು ಮಾಡುತ್ತೀರಿ. ಬಾಪ್ದಾದಾರವರು ನೋಡುತ್ತಾ ಇರುವುದರಿಂದ ನಗುವೂ ಬರುತ್ತದೆ. ಹೇಗೆ ಸವಾರಿ (ವಾಹನವನ್ನು) ನಡೆಸುತ್ತಾ ಇದ್ದೀರಿ, ಲಗಾಮೂ ಕೈಯಲ್ಲಿ ಇದೆ. ಆದರೆ ಒಂದುವೇಳೆ ನಡೆಯುತ್ತಾ ನಡೆಯುತ್ತಾ ಲಗಾಮು ಹಿಡಿದುಕೊಂಡಿರುವವರ ಬುದ್ಧಿ ಅಥವಾ ಮನಸ್ಸು ಯಾವುದಾದರೂ ಸೈಡ್ಸೀನ್ (ರಸ್ತೆಯ ಬದಿಯ ದೃಶ್ಯದ) ಕಡೆ ಆಕರ್ಷಿತವಾಗಿ, ನಾಟಿಬಿಟ್ಟರೆ ಏನಾಗುತ್ತದೆ? ಲಗಾಮೂ ಸಡಿಲವಾಗುತ್ತದೆ ಹಾಗೂ ಲಗಾಮೂ ಸಡಿಲವಾಗುವುದರಿಂದ ಮನಸ್ಸು ಅವಶ್ಯವಾಗಿ ಚಂಚಲವಾಗಿಯೇ ಆಗುತ್ತದೆ. ಅದ್ದರಿಂದ ಶ್ರೀಮಠದ ಲಗಾಮನ್ನು ಸದಾ ನಿಮ್ಮೊಳಗೆ ಸ್ಮೃತಿಯಲ್ಲಿಟ್ಟುಕೊಳ್ಳಿರಿ. ಯಾವಾಗಲಾದರೂ ಮನಸ್ಸು ಚಂಚಲವಾಗುವಂತಹ ಪರಿಸ್ಥಿತಿಯೇನಾದರೂ ಬಂದರೆ ಶ್ರೀಮತದ ಲಗಾಮನ್ನು ಬಿಗಿ ಮಾಡಿರಿ ಆಗ ಏನೂ ಆಗುವುದಿಲ್ಲ. ಇದರಿಂದ ಲಕ್ಷ್ಯವನ್ನು ಮುಟ್ಟಿಬಿಡುವಿರಿ. ಶ್ರೀಮತವು ಪ್ರತಿಯೊಂದು ಹೆಜ್ಜೆಯ ಬಗ್ಗೆಯೂ ಇದೆ. ಶ್ರೀಮತವು ಕೇವಲ ಬ್ರಹ್ಮಚಾರಿಯಾಗಿರಿ ಎಂಬುದಲ್ಲ. ಪ್ರತಿಯೊಂದು ಕರ್ಮದ ಸಲುವಾಗಿಯೂ ಶ್ರೀಮತವಿದೆ, ನಡೆಯುವುದು, ಊಟ ಮಾಡುವುದು,

ಪಾನೀಯ ಸೇವಿಸುವುದು, ಕೇಳುವುದು, ಮಾತನಾಡುವುದು - ಎಲ್ಲದರ ಸಲುವಾಗಿಯೂ ಶ್ರೀಮತವಿದೆ. ಇದೆಯೋ ಇಲ್ಲವು? ಒಂದುವೇಳೆ ನೀವು ಪರಚಿಂತನೆ ಮಾಡುತ್ತಾ ಇದ್ದರೆ ಅದು ಶ್ರೀಮತವಾಗಿದೆಯೇನು? ಆದ್ದರಿಂದ ಶ್ರೀಮತವನ್ನು ಅಸಡ್ಡೆ ಮಾಡಿದರೆ, ಮನಸ್ಸಿಗೆ ಚಂಚಲವಾಗಲು ಅವಕಾಶವು ದೊರೆಯುತ್ತದೆ. ಆಮೇಲೆ ಅದಕ್ಕೆ ಅಭ್ಯಾಸವಾಗಿ ಬಿಡುತ್ತದೆ. ಹೀಗೆ ಅಭ್ಯಾಸ ಮಾಡಿಸುವವರು ಯಾರಾಗಿದ್ದಾರೆ. ನೀವೇ ಆಗಿದ್ದೀರಲ್ಲವೇ. ಆದ್ದರಿಂದ ಮೊದಲು ಮನಸ್ಸಿನ ರಾಜಾ ಆಗಿರಿ. ಪರಿಶೀಲನೆ ಮಾಡಿಕೊಳ್ಳಿರಿ - ಒಳೊಳಗೇ ಈ ಮಂತ್ರಿಯು ತನ್ನ ರಾಜ್ಯವನ್ನು ಸ್ಥಾಪನೆ ಮಾಡುತ್ತಾ ಇಲ್ಲ ತಾನೇ? ಹೇಗೆ ಈಗಿನ ಕಾಲದ ರಾಜ್ಯದಲ್ಲಿ ಪ್ರತ್ಯೇಕ ಗುಂಪನ್ನು ಮಾಡಿಕೊಂಡು ಅಧಿಕಾರದಲ್ಲಿ ಬಂದುಬಿಡುತ್ತಾರೆ ಹಾಗೂ ಮುಂಚೆ ಅಧಿಕಾರದಲ್ಲಿದ್ದವರನ್ನು ಪದಚ್ಯುತಗೊಳಿಸಲು ಪ್ರಯತ್ನ ಮಾಡುತ್ತಾರೆ. ಹಾಗೆಯೇ ಈ ಮನಸ್ಸೂ ಸಹ ಹಾಗೆಯೇ ಮಾಡುತ್ತದೆ. ಬುದ್ಧಿಯನ್ನೂ ಸಹ ತನ್ನ ಪರವಾಗಿ ಮಾಡಿಕೊಂಡು ಬಿಡುತ್ತದೆ. ಬಾಯಿಯನ್ನು, ಕಿವಿಗಳನ್ನು, ಎಲ್ಲಾ ... ಕರ್ಮೇಂದ್ರಿಯಗಳನ್ನೂ ತನ್ನ ವಶಮಾಡಿಕೊಂಡು ಬಿಡುತ್ತದೆ. ಆದ್ದರಿಂದ ಪ್ರತಿದಿನವೂ ಪರಿಶೀಲನೆ ಮಾಡಿಕೊಳ್ಳಿರಿ. ಸಮಾಚಾರವನ್ನು ಕೇಳಿರಿ. ಹೇ ಮಂತ್ರಿ ಮನಸ್ಸೇ ನೀನು ಏನು ಮಾಡಿದೆ? ಏನಾದರೂ ಮೋಸ ಮಾಡಲಿಲ್ಲ ತಾನೇ? ಎಲ್ಲಿಯಾದರೂ ಒಳೊಳಗೇ ಗುಂಪು ಕಟ್ಟಿಕೊಂಡು ನಿಮ್ಮನ್ನು ರಾಜನಿಗೆ ಬದಲಾಗಿ ಗುಲಾಮನನ್ನಾಗಿ ಮಾಡಿಬಿಡಬಹುದು. ಹಾಗೆ ಆಗಬಾರದು. ನೋಡಿರಿ ಬ್ರಹ್ಮಾಬಾಬಾ ಆದಿಯಲ್ಲಿ ಪ್ರತಿದಿನವೂ ಈ ದರ್ಬಾರನ್ನು ವ್ಯವಸ್ಥೆ ಮಾಡುತ್ತಿದ್ದರು. ಅದರಲ್ಲಿ ಎಲ್ಲಾ ಸಹಯೋಗೀ ಸಾಥಿಗಳಿಂದ ಸಮಾಚಾರ ಕೇಳುತ್ತಿದ್ದರು. ಇದು ಪ್ರತಿದಿನದ ಬ್ರಹ್ಮಾಬಾಬಾರವರ ಆದಿಯ ದಿನಚರಿಯಾಗಿತ್ತು. ಕೇಳಿದ್ದೀರಲ್ಲವೇ? ಹೀಗೆ ಬ್ರಹ್ಮಾಬಾಬಾರವರೂ ಸಹ ಪರಿಶ್ರಮ ಮಾಡಿದ್ದಾರಲ್ಲವೇ. ಗಮನ ಇಟ್ಟುಕೊಂಡಿದ್ದುದರಿಂದ ಸ್ವರಾಜ್ಯ ಅಧಿಕಾರಿಯಾದರು. ಶಿವತಂದೆಯಂತೂ ನಿರಾಕಾರ ಆಗಿದ್ದಾರೆ. ಆದರೆ ಬ್ರಹ್ಮಾಬಾಬಾರವರಂತೂ ನಿಮ್ಮ ಸಮಾನ ಇಡೀ ಜೀವನದ ಪುರುಷಾರ್ಥದಿಂದ ಪ್ರಾಲಬ್ಧವನ್ನು ಪ್ರಾಪ್ತಿ ಮಾಡಿಕೊಂಡರು. ಆದ್ದರಿಂದ ಬ್ರಹ್ಮಾಬಾಬಾರವರನ್ನು ಅನುಕರಣೆ ಮಾಡಿರಿ. ಮನಸ್ಸು ತುಂಬಾ ಚಂಚಲ ಆಗಿದೆ ಹಾಗೂ ತುಂಬಾ ತೀವ್ರಗತಿಯುಳ್ಳದಾಗಿದೆ. ಒಂದು ಸೆಕೆಂಡಿನಲ್ಲಿ ನಿಮ್ಮನ್ನು ವಿದೇಶದಲ್ಲಿ ಎಲ್ಲೆಡೆಯೂ ಸುತ್ತಿಸಿಕೊಂಡು ಬರಬಲ್ಲದು. ಆದ್ದರಿಂದ ಏನು ಕೇಳಿದಿರಿ? ಬಾಲಕರಿಂದ ಮಾಲಿಕರಾಗಿರಿ. ಬಾಲಕನಾಗಿ ಬಿಟ್ಟೆನು, ಆಸ್ತಿಯು ಸಿಕ್ಕಿಬಿಟ್ಟಿತೆಂದು ಖುಷಿಯಾಗಿರುವುದು ಸರಿಯಲ್ಲ. ಆದರೆ ಒಂದುವೇಳೆ ಆಸ್ತಿಗೆ ಮಾಲಿಕರಾಗದಿದ್ದರೆ, ಬಾಲಕತನದಿಂದ ಏನು ಲಾಭವಾಯಿತು? ಬಾಲಕನ ಅರ್ಥವೇ ಮಾಲಿಕನಾಗುವುದಾಗಿದೆ. ಆದರೆ ಸ್ವರಾಜ್ಯದ ಮಾಲಿಕನೂ ಆಗಿರಿ, ಕೇವಲ ಆಸ್ತಿಯನ್ನು ನೋಡಿಕೊಂಡು ಖುಷಿಯಾಗಬೇಡಿರಿ, ಸ್ವರಾಜ್ಯ ಅಧಿಕಾರಿಯಾಗಿರಿ. ಇಷ್ಟು ಸಣ್ಣದಾದ ಕಣ್ಣು ಬಿಂದುವಾಗಿದೆ. ಅದೂ ಸಹ ಮೋಸ ಮಾಡಿಬಿಡುತ್ತದೆ. ಆದ್ದರಿಂದ ಬಾಪ್ದಾದಾರವರು ಎಲ್ಲಾ ಮಕ್ಕಳೂ ಸ್ವರಾಜ್ಯಾಧಿಕಾರೀ ರಾಜನಾಗುವುದನ್ನು ನೋಡಲು ಬಯಸುತ್ತಾರೆ. ಅಧಿಕಾರಿಯು ಅಧೀನವಾಗಿರುವುದಿಲ್ಲ. ತಿಳಿಯಿತೇ?

ಏನು ಆಗುವಿರಿ? ಬಾಲಕನಿಂದ ಮಾಲಿಕ. ಹಿಂದೆ ಕುಳಿತಿರುವವರು ಏನಾಗುವಿರಿ? ಬಾಲಕನಿಂದ ಮಾಲಿಕ ಆಗುವೆವೆಂದು ಜೋರಾಗಿ ಹೇಳಿರಿ. ಮಾತೆಯರು ಏನಾಗುವಿರಿ? ಬಾಲಕನಿಂದ ಮಾಲಿಕ ಹಾಗೂ ರಾವಣನ ವಸ್ತುವನ್ನಂತೂ ಇಲ್ಲಿ ಸಭಾಂಗಣದಲ್ಲಿಯೇ ಬಿಟ್ಟು ಹೋಗಿರಿ. ಇದು ತಪಸ್ಸಿನ ಸ್ಥಾನವಾಗಿದೆಯಲ್ಲವೇ. ತಪಸ್ಸನ್ನು ಅಗ್ನಿಯೆಂದು ಕರೆಯಲಾಗುತ್ತದೆ. ಆದ್ದರಿಂದ ಅಗ್ನಿಯಲ್ಲಿ ರಾವಣನ ವಸ್ತುವು ವಿನಾಶವಾಗಿ ಬಿಡುತ್ತದೆ.

ಮಕ್ಕಳಿಗೆ ಇನ್ನೂ ರಾವಣನೊಂದಿಗೆ ಪ್ರೀತಿಯಿರುವುದನ್ನು ಬಾಪ್ದಾದಾರವರು ನೋಡಿದರು. ಪ್ರೀತಿಯಿದೆಯೇ? ಮನಸ್ಸಿನಿಂದ ಪ್ರೀತಿಸುವುದಿಲ್ಲ. ಆದರೆ ಉಳಿದು ಬಿಟ್ಟಿದೆ. ಈಗ ಇದನ್ನು ವಿನಾಶಮಾಡಿರಿ. ಶಿಕ್ಷಕಿಯರು ಏನು ಮಾಡುವಿರಿ? ಇಲ್ಲಿಯೇ ಬಿಟ್ಟು ಹೋಗುವಿರೋ ಅಥವಾ ಟ್ರೈನಿನಲ್ಲಿ ಎಸೆದು ಬಿಡುವಿರೋ? ಏಕೆಂದರೆ 63 ಜನ್ಮಗಳ ಹಳೆಯ ವಸ್ತುವಾಗಿರುವುದರಿಂದ ಸ್ವಲ್ಪ ಪ್ರೀತಿಯೇನೋ ಇದೆ. ಆದ್ದರಿಂದ ಪಾಂಡವರು ಏನು ಮಾಡುವಿರಿ? ಇಲ್ಲಿಯೇ ಬಿಟ್ಟು ಹೋಗುವಿರೋ ಅಥವಾ ಕೆಳಗೆ ಅಬೂರೋಡ್ನಲ್ಲಿ ಬಿಡುವಿರೋ? ಇಲ್ಲಿಯೇ ಬಿಟ್ಟು ಹೋಗಿರಿ. ಬಿಡಲು ತಯಾರಾಗಿದ್ದೀರಾ? ಅರೆ ಮನಸ್ಸಿನಲ್ಲಿ ಆಗಲಿ ಎಂದು ಹೇಳುತ್ತಿದ್ದೀರಿ. ಬಾಪ್ದಾದಾರವರು ಪ್ರತಿದಿನವೂ ಮಕ್ಕಳಲ್ಲಿ ಯಾರಾದರೊಬ್ಬರ ನ್ಯೂನತೆಗಳನ್ನು ಪರಿಶೀಲನೆ ಮಾಡುತ್ತಾರೆ. ಏಕೆಂದರೆ ಪರಿವರ್ತನೆ ಆಗಬೇಕಲ್ಲವೇ. ಆದ್ದರಿಂದ ಚೆಕ್ ಮಾಡಿಕೊಂಡರೆ ಚೇಂಜ್ (ಪರಿವರ್ತನೆ) ಆಗುವಿರಲ್ಲವೇ.

ಒಳ್ಳೆಯದು. ಈ ಅವಕಾಶವಂತೂ ಹೆಚ್ಚಿನ ಅವಕಾಶವು ದೊರೆತಿದೆ, ಮೊದಲನೆಯ ಸಲ ಯಾರು ಬಂದಿದ್ದೀರೋ ಅವರು ಕೈ ಎತ್ತಿರಿ, ಇದಂತೂ ಹೊಸಬರಿಗೆ ಅಥವಾ ಹಳಬರಿಗೆ ಇದ್ದಕ್ಕಿದ್ದಂತೆಯೇ ಲಾಟರಿಯು ಸಿಕ್ಕಿದೆ. ಹೀಗೆ, ಅನಿರೀಕ್ಷಿತವಾದ ಲಾಟರಿಯ ಮಹತ್ವವು ಇರುತ್ತದೆ. ಆದ್ದರಿಂದ ಈ ಲಾಟರಿಯನ್ನು ಸದಾ ಪ್ರತ್ಯಕ್ಷದಲ್ಲಿ ಕರ್ಮದಲ್ಲಿ ತರುತ್ತಾ ವೃದ್ಧಿ ಮಾಡಿಕೊಳ್ಳುತ್ತಾ ಇರಿ. ಎಷ್ಟು ಸ್ವಯಂ ನಿಮ್ಮ ಸಲುವಾಗಿ ಅಥವಾ ಅನ್ಯರ ಸಲುವಾಗಿ ಕಾರ್ಯದಲ್ಲಿ ಉಪಯೋಗಿಸುವಿರೋ? ಅಷ್ಟು ವೃದ್ಧಿಯಾಗುತ್ತಾ ಇರುವುದು. ಆದ್ದರಿಂದ ವೃದ್ಧಿ ಮಾಡಿಕೊಳ್ಳುತ್ತಾ ಇರಿ. ಈ ಲಾಟರಿಯ ದಿನವನ್ನು ಮರೆಯಬೇಡಿರಿ. ನೆನಪಿಟ್ಟುಕೊಳ್ಳಿರಿ.

ನಾಲ್ಕೂ ಕಡೆಯ ಬಾಲಕರಿಂದ ಮಾಲಿಕರಾಗಿ ಡಬ್ಬಲ್ ಅಧಿಕಾರವನ್ನು ತೆಗೆದುಕೊಳ್ಳುವ ಶ್ರೇಷ್ಠ ಆತ್ಮರು, ಸದಾ ಸ್ವರಾಜ್ಯಾಧಿಕಾರಿಯಾಗಿ ನಿಮ್ಮ ರಾಜ್ಯವನ್ನು ನಡೆಸುವ ಭಾಗ್ಯವಂತ ಆತ್ಮರು, ಸದಾ ನಿಮ್ಮ ತಂದೆಯ ಸಂಸ್ಕಾರವೇ ನನ್ನ ಸಂಸ್ಕಾರವಾಗಿದೆ ಎನ್ನುವ ವಿಧಿಯಿಂದ ಸೇವೆಯಲ್ಲಿ ಮುನ್ನಡೆಯುವ ಶ್ರೇಷ್ಠ ಸೇವಾಧಾರೀ ಆತ್ಮರಿಗೆ ಬಾಪ್ದಾದಾರವರ ನೆನಪು

ಪ್ರೀತಿ ಹಾಗೂ ನಮಸ್ತೆ.

ವರದಾನ: ವರದಾನ: ಬ್ರಾಹ್ಮಣ ಜೀವನದಲ್ಲಿ ಖುಷಿಯ ವರದಾನವನ್ನು ಸದಾ ಖಾಯಂ ಆಗಿಟ್ಟುಕೊಳ್ಳುವಂತಹವರೇ ಮಹಾನ್ ಆತ್ಮ ಭವ

ಬ್ರಾಹ್ಮಣ ಜೀವನದಲ್ಲಿ ಖುಷಿಯು ಜನ್ಮ ಸಿದ್ಧ ಅಧಿಕಾರವಾಗಿದೆ, ಸದಾ ಖುಷಿಯಲ್ಲಿರುವುದೇ ಮಹಾನತೆಯಾಗಿದೆ. ಯಾರು ಈ ಖುಶಿಯ ವರದಾನವನ್ನು ಖಾಯಂ ಆಗಿಟ್ಟುಕೊಳ್ಳುತ್ತಾರೆ ಅವರೇ ಮಹಾನ್ ಆಗಿದ್ದಾರೆ. ಆದ್ದರಿಂದ ಎಂದೂ ಖುಷಿಯನ್ನು ಕಳೆದುಕೊಳ್ಳ ಬೇಡಿ. ಸಮಸ್ಯೆಯಂತು ಬರುವುದು ಮತ್ತು ಹೋಗುವುದು ಆದರೆ ಖುಷಿ ಮಾತ್ರ ಹೋಗದಿರಲಿ ಏಕೆಂದರೆ ಸಮಸ್ಯೆ, ಪರ-ಸ್ಥಿತಿ ಯಾಗಿದೆ, ಬೇರೆ ಕಡೆಯಿಂದ ಬಂದಿರುವುದು, ಅದಂತು ಬರುವುದು-ಹೋಗುವುದು. ಖುಷಿಯಂತು ನನ್ನ ವಸ್ತು ಆಗಿದೆ, ತಮ್ಮ ವಸ್ತುವನ್ನು ಸದಾ ಜೊತೆಯಲ್ಲಿಟ್ಟುಕೊಳ್ಳುತ್ತಾರೆ ಆದ್ದರಿಂದ ಒಂದುವೇಳೆ ಶರೀರ ಹೋಗಲಿ ಆದರೆ ಖುಷಿ ಹೋಗದಿರಲಿ. ಖುಷಿಯಿಂದ ಶರೀರ ಸಹ ಹೋದರೂ ಹೊಸದು ಮತ್ತು ಚೆನ್ನಾಗಿರುವುದು ಸಿಗುವುದು.

ಸ್ಲೋಗನ್: ಸ್ಲೋಗನ್: ಬಾಪ್ದಾದಾರವರ ಹೃದಯ ಪೂರ್ವಕ ಶುಭಾಷಯ ಪಡೆಯಬೇಕಾದರೆ ಅನೇಕ ಮಾತುಗಳನ್ನು ನೋಡದೆ ಅವಿಶ್ರಾಂತರಾಗಿ ಸೇವೆಯಲ್ಲಿ ಉಪಸ್ಥಿತರಾಗಿರಿ.